**ಪ್ರಧಾನ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು**

**ಸಿಸಿ 2172/2022 ಡಿಡಬ್ಲ್ಯೂ-1**

| | |
|---|---|
| ಸಾಕ್ಷಿದಾರರ ಹೆಸರು | - ಬಿಂದುಶ್ರೀ |
| ತಂದೆಯ ಹೆಸರು | - ಕೃಷ್ಣೇಗೌಡ |
| ವಯಸ್ಸು | - 25 ವರ್ಷ |
| ಉದ್ಯೋಗ | - ಖಾಸಗಿ |
| ವಾಸಸ್ಥಳ | - ಬೆಂಗಳೂರು |

ದಿನಾಂಕಃ- 08-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃಃ ಆರೋಪಿ ಪರ ಶ್ರೀ. ವಕೀಲರಿಂದಃ-**

ಪಿರ್ಯಾದುದಾರರಿಗೂ ಮತ್ತು ನನಗೂ ಯಾವುದೇ ಪರಿಚಯವಿಲ್ಲ. ನಾನು ಸದರಿಯವರನ್ನು ನ್ಯಾಯಾಲಯಕ್ಕೆ ಹಾಜರಾಗುವವರೆಗೂ ನೋಡೇ ಇರುವುದಿಲ್ಲ. ನ್ಯಾಯಾಲಯದಿಂದ ಅರೆಸ್ಟ್ ವಾರೆಂಟ್ ಬಂದ ನಂತರ ನನ್ನ ತಾಯಿಯನ್ನು ವಿಚಾರಿಸಲಾಗಿ ನನ್ನ ತಾಯಿ ಗೀತಾ ಎಂಬುವವರಿಗೆ ಚೀಟಿ ವ್ಯವಹಾರಕ್ಕಾಗಿ ನನ್ನ ಚೆಕ್ ನ್ನು ನೀಡಿದ್ದಾಗಿ ಹೇಳಿರುತ್ತಾರೆ ಮತ್ತು ಚೀಟಿ ವ್ಯವಹಾರ ಮುಗಿದರೂ ಚೆಕ್ ಹಿಂದಿರುಗಿಸಿಲ್ಲ ಎಂದು ಹೇಳಿರುತ್ತಾರೆ. ನಂತರ ಸದರಿ ದೂರುದಾರರು ಮೇಲೆ ಹೇಳಿದ ಗೀತಾ ರವರ ಸಹೋದರ ಎಂದು ತಿಳಿದು ಬಂತು. ಆದ್ದರಿಂದ ಸದರಿ ಗೀತಾ ಮತ್ತು ದೂರುದಾರರು ನನ್ನ ತಾಯಿ ನೀಡಿದ ನನ್ನ ಚೆಕ್ ನ್ನು ದುರುಪಯೋಗಪಡಿಸಿಕೊಂಡಿದ್ದು ನನಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲ. ವಿವಾದಿತ ದಿನಾಂಕದಂದು ನಾನು ಇನ್ನು ವಿದ್ಯಾರ್ಥಿಯಾಗಿದ್ದು ನನಗೆ ಸದರಿ ಸಾಲದ ಅವಶ್ಯಕತೆ ಇರಲಿಲ್ಲ ಮತ್ತು ನನ್ನ ಅವಶ್ಯಕತೆಗಳನ್ನು ನನ್ನ ತಂದೆ ತಾಯಿ ರವರು ನಿರ್ವಹಿಸುತ್ತಿದ್ದರು.ಆದ್ದರಿಂದ ಪ್ರಕರಣವನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಈ ಹಂತದಲ್ಲಿ ಮುಂದುವರೆದ ಮುಖ್ಯವಿಚಾರಣೆಗೆ ಕಾಲಾವಕಾಶ ಕೋರಿದ್ದು, 300 ರೂ ದಂಡದೊಂದಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆಎಂಎಫ್,ಸಿ,

ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ